ಪಂಚಾಯತ್ ರಸ್ತೆಗಳನ್ನು ತೆಗೆದುಕೊಳ್ಳುವ ಆಲೋಚನೆ ಇಲ್ಲ.

ಆ) ಹಾಗಿದ್ದಲ್ಲಿ, ಶಾಸಕರಿಂದ ಈ ಬಗ್ಗೆ ಪ್ರತಿಕ್ರಿಯೇ ಬಂದಿದೆಯೇ:- ಮೇಲಿನ ಯೋಜನೆಯಂತೆ ಕೆಲವು ಶಾಸಕರು 29.00 ಲಕ್ಷ ರೂ. ಗಳ ಒಟ್ಟು ಅಂದಾಜಿನ ರಸ್ತೆಗಳ ಅಭಿವೃದ್ಧಿಯ ಪಟ್ಟಿಯನ್ನು ಸಲ್ಲಿಸಿದ್ದಾರೆ.

ಇ) ಲೋಕೋಪಯೋಗಿ ಇಲಾಖೆಯು ಕುಮಟಾ ವಿಧಾನ ಸಭಾ ಕ್ಷೇತ್ರದಲ್ಲಿನ ರಸ್ತೆಯನ್ನು ತೆಗೆದುಕೊಂಡಿದೆಯೇ:- ಕುಮಟಾ ವಿಧಾನ ಸಭಾ ಕ್ಷೇತ್ರದಲ್ಲಿರುವ ಯಾವುದೇ ಜಿಲ್ಲಾ ಪಂಚಾಯತ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಯೋಜನೆಯಿರುವುದಿಲ್ಲ.

ವಿಷಯ:- ಕಾರ್ಮಿಕರಿಗೆ ಜೀವನ ನಿರ್ವಹಣಾ ಭತ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 31 (190)

ಡಾ: ಎಂ. ಪಿ. ಕರ್ಕಿ (ಕುಮಟಾ)

ಮಾನ್ಯ ಉಪ ಮುಖ್ಯ ಮಂತ್ರಿಯವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪ್ರಸುತ್ತದಲ್ಲಿರುವ ಕಾನೂನಿನ ಪ್ರಕಾರ ರಾಜ್ಯದಲ್ಲಿರುವ ಕಾರ್ಮಿಕರಿಗೆ ಜೀವನ ನಿರ್ವಹಣಾ ಭತ್ಯೆಯನ್ನು ಪ್ರತಿ ವರ್ಷ ಜೀವನ ಸೂಚ್ಯಾಂಕದ ಆಧಾರದ ಮೇಲೆ ಪರಿಷ್ಕರಿಸಲಾಗಿದೆಯೇ? :- ಹೌದು.

ಆ) ಇದು ಹಿಂದಿನ ವರ್ಷದ ಜೀವನ ಪರಿಸ್ಥಿತಿಗೆ ಸಂಬಂಧಪಟ್ಟಿರುತ್ತದೆ :- ಇಲ್ಲ. ಕಳೆದ ವರ್ಷದ ಬೆಲೆ ಸೂಚ್ಯಾಂಕದ ಸರಾಸರಿ ಆಧಾರದ ಮೇಲೆ ಗ್ರಾಹಕ ಬೆಲೆ ಸೂಚ್ಯಾಂಕ ನಿಗಧಿ ಪಡಿಸಲಾಗುತ್ತಿದೆ.

ಇ) ತುಟ್ಟಿಭತ್ಯೆಯನ್ನು ತ್ರೈಮಾಸಿಕವಾಗಿ ಪರಿಷ್ಕರಿಸದಿರುವುದರಿಂದ ಕಾರ್ಮಿಕರಿಗೆ ಹೆಚ್ಚಿನ ನ್ಯಾಯ ಸಿಗುವಂತಾಗುವುದಿಲ್ಲವೇ:- ಬೆಲೆ ಸೂಚ್ಯಾಂಕ ಪ್ರಕಟಣೆ ಮಾಡಲು ಎರಡರಿಂದ ಮೂರು ತಿಂಗಳು ಸಾಮಾನ್ಯ ವಾಗಿ ಬೇಕಾಗಿರುವುದರಿಂದ ಆ ಕಾರ್ಯ ಸಾಧ್ಯವಿಲ್ಲ.

ಈ) ಇದು ಹಾಗಿದ್ದಲ್ಲಿ ಸರ್ಕಾರವು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವುದೆ?:- ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿದ್ಧರಾಮಯ್ಯ
(ಉಪ ಮುಖ್ಯ ಮಂತ್ರಿಗಳು)

ವಿಷಯ:- 95-96ರ ಆಯವ್ಯಯದಲ್ಲಿ ಎಲ್ಲಾ ಇಲಾಖೆಗಳ ಯೋಜನೆಗಳಿಗೆ ತೆಗೆದಿರಿಸಿರುವ ಹಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 32 (447)

ಶ್ರೀ ಡಿ. ಆರ್. ಪಾಟೀಲ್ (ಗದಗ್)

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96ರ ಆಯವ್ಯಯದಲ್ಲಿ ರಾಜ್ಯದ ಎಲ್ಲಾ ಇಲಾಖೆಯ ಯೋಜನೆಗಳಿಗೆ

ತೆಗೆದಿರಿಸಿದ ಹಣ ಎಷ್ಟು?:- 1995-96 ನೇ ಸಾಲಿಗೆ ಇಲಾಖಾವಾರು ರಾಜ್ಯ ಯೋಜನಾ ಮೊಬಲಗು ಕೆಳಕಂಡಂತಿದೆ.

ಇಲಾಖೆ	1995-96ರ ಮೊಬಲಗು (ಆ.ಅಂ)
ಕೃಷಿ ಮತ್ತು ತೋಟಗಾರಿಕೆ	93
ಪಶುಸಂಗೋಪನೆ ಮತ್ತು ಮೀನುಗಾರಿಕೆ	48
ಸಹಕಾರ	41
ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ	64
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	357
ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ	
ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ	105
ನೀರಾವರಿ ಮತ್ತು ಕಾಡಾ	878
ಇಂಧನ	680
ಕಂದಾಯ	2
ವಾಣಿಜ್ಯ ಮತ್ತು ಕೈಗಾರಿಕೆ	233
ಲೋಕೋಪಯೋಗಿ	176
ಶಿಕ್ಷಣ	311
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	124
ವಸತಿ	123
ಹಣಕಾಸು	13
ನಗರಾಭಿವೃದ್ಧಿ	189
ವಾರ್ತಾ, ಪ್ರವಾಸೋದ್ಯಮಮತ್ತು ಯುವಜನ ಸೇವೆ	26
ಕನ್ನಡ ಮತ್ತು ಸಂಸ್ಕೃತಿ	7
ಗೃಹ ಮತ್ತು ಸಾರಿಗೆ	69
ಸಮಾಜ ಕಲ್ಯಾಣ	137
ಕಾರ್ಮಿಕ ಮತ್ತು ಉದ್ಯೋಗ	8
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	63
ಆಹಾರ ಮತ್ತು ನಾಗರೀಕ ಸರಬರಾಜು	3
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	1
ಕಾನೂನು ಮತ್ತು ಸಂಸದೀಯ ವ್ಯವಹಾರ	6
ಒಟ್ಟು	3758